ಹೊಸದಾಗಿ ಸ್ಪಿನ್ನಿಂಗ್ ಮಿಲ್ಲುಗಳು ತೆರೆಯಲು ಅನುಮತಿ

680 - ಶ್ರೀ ಎಂ.ಸಿ. ಕುನ್ನೂರ್ (ಶಿಗ್ಗಾಂವ ಸವಣೂರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ಎಷ್ಟು ಸ್ಪಿನ್ನಿಂಗ್ ಮಿಲ್‌ಗಳು ಹೊಸದಾಗಿ ಪ್ರಾರಂಭಿಸಲು ಸರ್ಕಾರದಿಂದ ಪರವಾನಿಗೆ ನೀಡಲಾಗಿದೆ?

ಆ) ಸದರಿ ಸ್ಪಿನಿಂಗ್ ಮಿಲ್ಲುಗಳ ಹೆಸರು ಮತ್ತು ವಿಳಾಸಗಳನ್ನು ನೀಡುವುದು?

ಇ) ಹೊಸದಾಗಿ ಸ್ಪಿನಿಂಗ್ ಮಿಲ್ ತೆರೆಯಲು ಸರ್ಕಾರದ ನಿಯಮಾವಳಿಗಳೇನು?

ಈ) ಸದರಿ ನಿಯಮಾವಳಿಗಳಿಂದ ರೈತರ ಬಾಂಧವರಿಗೆ ತೊಂದರೆ ಹಾಗೂ ಸದರಿ ಕ್ಷೇತ್ರಕ್ಕೆ ಉತ್ತೇಜನ ನೀಡಲು ಅಡ್ಡಿಯಾಗುವುದಿಲ್ಲವೇ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಸಹಕಾರ ರಂಗದಲ್ಲಿ ಅಂತಹ ಯಾವುದೇ ಅನುಮತಿ ನೀಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸಹಕಾರ ರಂಗದಲ್ಲಿ ನೂನ ಗಿರಣಿಗಳನ್ನು ಸ್ಥಾಪಿಸುವ ಸಂಬಂಧದಲ್ಲಿ ರೈತರ ಬೆಳೆಗಾರರು 50 ಲಕ್ಷ ರೂಪಗಳನ್ನು ಸಂಗ್ರಹಿಸಿದ ಪ್ರಕರಣಗಳಲ್ಲಿ ಮಾತ್ರ ಮುಖ್ಯ ಪ್ರವರ್ತಕರನ್ನು ನೇಮಿಸಲು ಅನುಮತಿ ಹಾಗೂ ಶೇರು ಬಂಡವಾಳವನ್ನು ಸಂಗ್ರಹಿಸಲು ಮತ್ತು ನೋಂದಣಿ ಮಾಡಲು ಅನುಮತಿ ನೀಡಲಾಗುವುದೆಂದು ಆದೇಶಿಸಲಾಗಿದೆ. 100 ಲಕ್ಷ ರೂ.ಗಳನ್ನು ಬೆಳೆಗಾರರ ಸಂಘವು ಸಂಗ್ರಹಿಸಿದ ಪ್ರಕರಣಗಳಲ್ಲಿ ಮಾತ್ರ ರಾಜ್ಯಸರ್ಕಾರವು ಗಿರಣಿ ಸ್ಥಾಪನೆಗೆ ಶಿಫಾರಸ್ಸು ಮಾಡಲಾಗುವುದೆಂದೂ ತಿಳಿಯಪಡಿಸಿದೆ.

ಈ) ಮತ್ತು ಉ) ಸಹಕಾರಿ ಕ್ಷೇತ್ರದಲ್ಲಿ ಗಿರಣಿ ಸ್ಥಾಪಿಸಲು ಆಸಕ್ತಿಯುಳ್ಳವರಿಗೆ ತೊಂದರೆಯಾಗುವುದಿಲ್ಲ.

ಹರಪನಹಳ್ಳಿ ತಾಲ್ಲೂಕಿನಲ್ಲಿ ನೆರೆಹಾವಳಿಯಿಂದ ದಿನಾಂಕ 15,16,17 ಮತ್ತು 18 ನವೆಂಬರ್ 92ರಲ್ಲಿ ಆಗಿರುವ ಹಾನಿ ಬಗ್ಗೆ ಪರಿಹಾರ.

726 - ಶ್ರೀ ಬಿ.ಹೆಚ್. ಯಂಕಾನಾಯಕ್ (ಹರಪನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪನಹಳ್ಳಿ ಕ್ಷೇತ್ರಕ್ಕೆ ಸೇರಿದ ಎಂಟು ಗ್ರಾಮಗಳಾದ 1) ವಟ್ಲಳ್ಳಿ, 2) ಕಡತಿ, 3) ನಂದ್ಯಾಲ 4) ನಿಟ್ಟೂರು 5) ನಿಟ್ಟೂರುಬಸಾಪುರ 6) ತಾವರೆಗುಂದಿ 7) ಹಲವಾಗಲು 8) ಗರ್ಭಗುಡಿಗಳಿಗೆ ನೆರೆಹಾವಳಿಯಿಂದ ಹಾನಿಗೊಳಗಾಗಿದ್ದು ಆ ಗ್ರಾಮಗಳಲ್ಲಿರುವ ಕುಟುಂಬಗಳಿಗೆ ಪರಿಹಾರವನ್ನು ಒದಗಿಸಲಾಗಿದೆಯೇ?

ಆ) ಇಲ್ಲದಿದ್ದಲ್ಲಿ, ಸರ್ಕಾರದವರು ಕೂಡಲೇ ಪರಿಹಾರ ಒದಗಿಸಿ ಮನೆ ಕಳೆದುಕೊಂಡವರಿಗೆ ಹೊಸ ಮನೆ ಕಟ್ಟಿಕೊಡಲು ಕ್ರಮ ಕೈಗೊಳ್ಳುವರೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಹೌದು. ಒದಗಿಸಲಾಗಿದೆ. ಈ ಗ್ರಾಮದಲ್ಲಿ ಉಂಟಾದ ನಷ್ಟ ಮತ್ತು ನೀಡಿದ ಪರಿಹಾರ ಈ ಕೆಳಕಂಡಂತೆ ಇವೆ :

(ಲಕ್ಷ ರೂಪಾಯಿಗಳಲ್ಲಿ)

ಪುಸ್ತೆ				ಉತ್ತರ					
ಗ್ರಾಮದ ಹೆಸರು	ಮನೆಗಳಿಗೆ ಹಾನಿ			ಜಾನುವಾರು ಹಾನಿ			ಬೆಳೆಗಳ ನಾಶ		
	ಪೂರ್ಣ	ನಷ್ಟ	ಭಾಗಶಃ	ನಷ್ಟ	ಸಂಖ್ಯೆ	ನಷ್ಟ	ಹೆಕ್ಟೇರ್	ನಷ್ಟ	ಒಟ್ಟು
1. ಕಡತಿ	122	18.70	260	70.10	1.27	0.86	1.25	2.20	91.86
2. ವಟ್ಲಳ್ಳಿ	124	5.63	-	-	-	-	-	-	5.63
3. ನಂದ್ಯಾಲ	92	18.00	49	5.50	-	-	-	-	23.50
4. ನಿಟ್ಟೂರು	90	8.70	129	1.80	10	0.08	134	6.38	16.96
5. ನಿಟ್ಟೂರು ಬಸಾಪುರ	73	17.50	15	1.00	425	1.27	60	1.08	20.85
6. ಹಲವಾಗಲು	90	27.50	431	41.00	30	0.16	434	2.13	70.79
7. ಗರ್ಭಗುಡಿ	64	1.60	62	6.65	-	-	-	-	8.25
8. ತವರೆಗುಂದಿ	76	13.20	77	4.20	3	0.06	106	5.30	22.76
ಒಟ್ಟು	**731**	**110.83**	**1043**	**130.25**	**595**	**2.43**	**860**	**17.09**	**260.60**

ಪೂರ್ಣವಾಗಿ ಮನೆಗಳಿಗೆ ಹಾನಿಗೊಳಗಾದ ಪರಿಹಾರ

	ಸಂಗ್ರಾಮಗಳ ಹೆಸರು	ಮನೆಗಳ ಸಂಖ್ಯೆ	ನೀಡಲಾದ ಪರಿಹಾರ
1	ಕಡತಿ	122	2.44
2	ವಟ್ಲಳ್ಳಿ	124	2.48
3	ನಂದ್ಯಾಲ	92	1.84
4	ನಿಟ್ಟೂರು	90	1.80
5	ನಿಟ್ಟೂರು ಬಸಾಪುರ	73	1.46
6	ಹಲವಾಗಲು	90	1.80
7	ಗರ್ಭಗುಡಿ	64	1.28
8	ತಾವರೆಗುಂಡಿ	76	1.52
	ಒಟ್ಟು	**731**	**14.62**

ಮೇಲೆ ಸೂಚಿಸಿರುವ ಹಳ್ಳಿಗಳಲ್ಲಿ ಪೂರ್ಣವಾಗಿ ಹಾನಿಗೊಳಗಾದ ಮನೆಗಳಿಗೆ ತಲಾ 2,000.00 ರೂ.ಗಳಂತೆ ಪರಿಹಾರವನ್ನು ಮಂಜೂರು ಮಾಡಿದೆ. ಪೂರ್ಣ ಹಾನಿಗೊಳಗಾಗಿರುವ ಮನೆಗಳಿಗೆ ತಲಾ 3,000.00 ರೂ. ಮೌಲ್ಯದ ಕಟ್ಟಡ ಸಾಮಗ್ರಿಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಭಾಗಶಃ ಹಾನಿಗೊಳಗಾಗಿರುವ ಮನೆಗಳಿಗೆ ನಗದು ಪರಿಹಾರ ನೀಡುವ ಕಾರ್ಯ ಪ್ರಗತಿಯಲ್ಲಿದೆ.

ಆ) ಮೇ (ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲೆಯಲ್ಲಿರುವ ಸಹಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳ ಸಂಖ್ಯೆ

846 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬೀದರ್ ಜಿಲ್ಲೆಯಲ್ಲಿರುವ ಸಹಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳೆಷ್ಟು?

ಆ) ನಾರಂಜ ಮತ್ತು ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಎಷ್ಟು ಟನ್ ಕಬ್ಬು ಅರೆಯುವ ಸಾಮರ್ಥ್ಯವಿದೆ?

ಇ) ಈ ಕಾರ್ಖಾನೆಗಳ ಬಗ್ಗೆ ಡಿಪ್ಪೆಲರಿ ಅಳವಡಿಸು ಅಲೋಚನೆ ಇದೆಯೇ ಇದ್ದರೆ ಯಾವಾಗ ಅಳವಡಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಕಾರ್ಯನಿರ್ವಹಿಸುತ್ತಿದ್ದು ಇನ್ನೊಂದು ಕಾರ್ಖಾನೆಯ ಸ್ಥಾಪನೆಗೆ ಭಾರತ ಸರ್ಕರ ಉದ್ದೇಶಿತ ಪತ್ರ ನೀಡಿದೆ.

ಆ) ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ 2500 ಟಿಸಿಡಿ.ಗಳು (ಈ ಕಾರ್ಖಾನೆ ಇನ್ನು ಸ್ಥಾಪಿತವಾಗಬೇಕಾದರೆ) ಪ್ರಸ್ತುತ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ 2000 ಟಿಸಿಡಿಗಳು.

ಇ) ಸದ್ಯಕ್ಕೆ ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.